**ಕರ್ನಾಟಕ ಸರ್ಕಾರ**

ಪಂಚಾಯತ್ ರಾಜ್ ಆಯುಕ್ತಾಲಯ

ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.

ಸಂಖ್ಯೆ: ಕಪಂರಾ/ಅಭಿವೃದ್ಧಿ/370/2024 ದಿನಾಂಕ:07.05.2024.

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

**ವಿಷಯ:** ರಾಜ್ಯ 5ನೇ ಹಣಕಾಸು ಆಯೋಗದ ಆರ್ಥಿಕ ಪರಿಸ್ಥಿತಿ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ 5ನೇ ಹಣಕಾಸು ಆಯೋಗವು ಪಂಚಾಯತ್ ರಾಜ್ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಪ್ರಕಾರ್ಯಗಳು ಆಡಳಿತ ವ್ಯವಸ್ಥೆ ಹಾಗೂ ಕುಂದುಕೊರತೆಗಳ ಬಗ್ಗೆ ತಿಳಿದುಕೊಳ್ಳಲು ವಿವರವಾದ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ ಈಗಾಗಲೇ ಪ್ರಶ್ನಾವಳಿಗಳನ್ನು ಸೇವಾ ಸಿಂಧು ತಂತ್ರಾಂಶದಲ್ಲಿ ಅಳವಡಿಸಲಾಗಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ User ID ಹಾಗೂ Password ಗಳನ್ನು ಇ-ಮೇಲ್ ನಲ್ಲಿ ಲಗತ್ತಿಸಿರುವ Excel ದಾಖಲೆಯಲ್ಲಿ ಪಾಸ್‌ವರ್ಡ್‌ನ್ನು ಕಳುಹಿಸಲಾಗಿದ್ದು, ಸದರಿ ಲಾಗಿನ್ ಪಾಸ್‌ವರ್ಡ್ ಬದಲಾಯಿಸಲು ತಿಳಿಸಿದೆ ಹಾಗೂ ಎಲ್ಲಾ ಗ್ರಾಮ ಪಂಚಾಯತಿಗಳು ನೀಡಲಾಗಿರುವ ಪ್ರಶ್ನಾವಳಿಗಳಲ್ಲಿ ತಮ್ಮ ತಮ್ಮ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸೇವಾ ಸಿಂಧು ತಂತ್ರಾಂಶದಲ್ಲಿ ದಿನಾಂಕ:31.05.2024ರ ಒಳಗಾಗಿ ಇಂದೀಕರಿಸಲು ಹಾಗೂ ಇಂದೀಕರಿಸಿದ ಮಾಹಿತಿಯ ಭೌತಿಕ ಪ್ರತಿಯನ್ನು ಸಹಿ ಮಾಡಿ ಆಯೋಗಕ್ಕೆ ಕಳುಹಿಸಿಕೊಡಲು ಮತ್ತು ಪಂಚತಂತ್ರ 2.0 ರಲ್ಲಿಯೂ ಸಹ ಪ್ರಚುರ ಪಡಿಸಲು ತಿಳಿಸುತ್ತಾ, ಆಯೋಗವು ತನ್ನ ಅಂತಿಮ ವರದಿಯನ್ನು ನೀಡುವ ದಿಶೆಯಲ್ಲಿ ಈ ಮಾಹಿತಿಗಳು ಅತ್ಯವಶ್ಯವಾಗಿರುವುದರಿಂದ ಕೇಳಲಾಗಿರುವ ಮಾಹಿತಿಯನ್ನು ಆದ್ಯತೆಯ ಮೇಲೆ ಒದಗಿಸುವಂತೆ ತಮ್ಮ ತಮ್ಮ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

**ಆಯುಕ್ತರು**

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

ಪ್ರತಿಯನ್ನು:

1. ಅಪರ ಕಾರ್ಯದರ್ಶಿ, 5ನೇ ರಾಜ್ಯ ಹಣಕಾಸು ಆಯೋಗ, 2ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
2. ಕಛೇರಿ ಪ್ರತಿ.